ಎಮ್.ವಿ.ಸಿ. ನಂ.212/2021
ಪಿ.ಡಬ್ಲ್ಯೂ.2

ದಿನಾಂಕಃ 12.01.2023
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ ಶ್ರೀ. ಎಸ್ ಡಿ ಡಿ ವಕೀಲರಿಂದ ಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ಸಾಕ್ಷಿಯು ಅಂಗನ್ಯೂನತೆ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.13 ಎಂದು ಗುರುತಿಸಲಾಗಿದೆ ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಮತ್ತು ನಿ.ಪಿ.13(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು 2 ನೇ ಎದುರುದಾರರ ಪರವಾಗಿ ಶ್ರೀ. ಎಸ್ ಯು ಪಿ ವಕೀಲರಿಂದ

3. ನಾನು ಗಾಯಾಳು ಅರ್ಜಿದಾರನಿಗೆ ಚಿಕಿತ್ಸೆ ನೀಡಿರುವುದಿಲ್ಲ ಅಂದರೆ ಸರಿ. ಆತನು ಅಂಗನ್ಯೂನತೆ ಪ್ರಮಾಣ ಪತ್ರ ಪಡೆದುಕೊಳ್ಳಲು ಮಾತ್ರ ನಮ್ಮ ಬಳಿ ಬಂದಿದ್ದ ಅಂದರೆ ಸರಿ. ನಿಪಿ 13 ರಲ್ಲಿ ಗಾಯಾಳು ಅರ್ಜಿದಾರನಿಗೆ ಯಾವ್ಯಾವ ಮೂಳೆ ಮುರಿತದ ಗಾಯಾಗಳು ಉಂಟಾಗಿದ್ದವು ಎಂದು ನಮೂದಿಸಿರುವುದಿಲ್ಲ. ಹಾಗೇ ನಮೂದಿಸದೇ ಇರುವುದಕ್ಕೆ ಯಾವುದೇ ವಿಶೇಷ ಕಾರಣ ಇರುವುದಿಲ್ಲ. ಅರ್ಜಿದಾರನಿಗೆ ಮೂಳೆ ಮುರಿತದ ಗಾಯಾಗಳು ಉಂಟಾಗದ ಕಾರಣ ನಾನು ನಿಪಿ 13 ರಲ್ಲಿ ಆ ಬಗ್ಗೆ ನಾನು ಮೂಳೆ ಮುರಿತದ ಗಾಯಾದ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೂಳೆ ಮುರಿತದ ಗಾಯಾಗಳನ್ನು ನಮೂದಿಸದೇ ಅಂಗನ್ಯೂನತೆ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಅರ್ಜಿದಾರನಿಗೆ ಉಂಟಾದ ತೊಂದರೆಗಳ ಬಗ್ಗೆ ನಮೂದಿಸಲು ಬರಲಾರದು ಎಂದರೆ ಸರಿಯಲ್ಲ. ನಿಪಿ 13 ರಲ್ಲಿ ನಮೂದಿಸಿರುವ ಅರ್ಜಿದಾರನ ತೊಂದರೆಗಳು ಆತನ ಎಡಮೊಣಕಾಲಿಗೆ ಸಂಬಂಧಿಸಿದ್ದು ಮಾತ್ರ ಆಗಿರುತ್ತದೆ. ಅರ್ಜಿದಾರನ ಎಡಮೊಣಕಾಲಿನ Tibia shaft ಆಗಿತ್ತು. ಅರ್ಜಿದಾರನ ಎಡಮೊಣಕಾಲಿನ Tibia shaft ಯಾವ ಸ್ವರೂಪದು ಆಗಿತ್ತು ಎನ್ನುವ ಬಗ್ಗೆ ನಿಪಿ 13 ರಲ್ಲಿ ಹೇಳಿರುವುದಿಲ್ಲ. ಯಾವುದೇ ಒಂದು ಗಾಯಕ್ಕೂ ಯಾವ ರೀತಿಯ ಚಿಕಿತ್ಸೆ ನೀಡಬೇಕು ಎನ್ನುವುದು ಆ ಗಾಯದ ಡೈಗ್ನೊಸಿಸ್ ಮಾಡಿದಾಗ ಮಾತ್ರ ಗೊತ್ತಾಗುತ್ತದೆ ಎಂದರೆ ಸರಿ. ನಿಪಿ 13 ರಲ್ಲಿ ನಮೂದಿಸಿರುವ restriction of movement ಬಗ್ಗೆ ಪರೀಕ್ಷೆ ಮಾಡುವ ಕಾಲಕ್ಕೆ ಭಾವಚಿತ್ರ ತೆಗೆದಿರುವುದಿಲ್ಲ ಮತ್ತು ಈ ಅರ್ಜಿಯಲ್ಲಿ ಸಲ್ಲಿಸಿರುವುದಿಲ್ಲ. ನಿಪಿ 13 ರಲ್ಲಿ ನಮೂದಿಸಿರುವ restriction of movement ಪರೀಕ್ಷೆ ನಾನು ಸೂಕ್ತವಾದ ರೀತಿಯಲ್ಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಾಡಿರುವ ರಫ್ ಕ್ಯಾಲುಕೂಲೆಷ್ನ್ ಶೀಟ್ ನಿಪಿ 13 ರಲ್ಲಿ ಸಲ್ಲಿಸಿರುವುದಿಲ್ಲ. ರಫ್ ಕ್ಯಾಲುಕೂಲೆಷ್ನ್ ಮತ್ತು ನಿಪಿ 13 ರಲ್ಲಿ ನ

ಕ್ಯಾಲುಕೂಲೇಷ್ ನ್ ಒಂದ್ಕೊಂದು ತಾಳೆ ಮಾಡಿದಾಗ ನಿಜಾಂಶ ಗೊತ್ತಾಗುತ್ತದೆ ಎಂದರೆ ಸರಿ. ನಾನು ಸುಳ್ಳು ಕ್ಯಾಲುಕೂಲೇಷ್‌ನ್ ಮಾಡಿರುವುದು ಗೊತ್ತಾಗಬಾರದು ಎನ್ನುವ ಉದ್ದೇಶದಿಂದ ರಫ್ ಕ್ಯಾಲುಕೂಲೇಷ್‌ನ್ ಶೀಟ್ ನಿಪಿ 13 ಜೊತೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಔಷದೋಪಚರ ಮೂಲಕ ಚಿಕಿತ್ಸೆ ನೀಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತ ಮುಂದುವರೆದು ಅರ್ಜಿದಾರನಿಗೆ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ ಎಂದು ನುಡಿಯುತ್ತಾರೆ. ಆ ರೀತಿ ಶಸ್ತ್ರ ಚಿಕಿತ್ಸೆ ಮಾಡಲಾಗಿತ್ತು ಎಂದು ಹೇಳಿ ನಾನು ಡಿಸಚಾರ್ಜ ಸಮರಿ ನೋಡಿ ಹೇಳುತ್ತಿದ್ದೇನೆ. ಅರ್ಜಿದಾರನಿಗೆ ಉಂಟಾದ ಗಾಯ ಸಮತಟವಾದ ಮತ್ತು ಹಾರ್ಡ ಸರ್ಫೆಸ ಮೇಲೆ ಬಿದ್ದಾಗ ಉಂಟಾಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಸಣ್ಣ ವಯಸ್ಸಿನಲ್ಲಿ ಗಾಯಾಗಳು ಆಗಿದ್ದೇ ಅವುಗಳು ವಾಸಿಯಾಗುವ ಪ್ರಕ್ರಿಯೆ ವೇಗವಾಗಿ ಇರುತ್ತದೆ ಎಂದರೆ ಸರಿ. ಅರ್ಜಿದಾರನಿಗೆ ಯಾವುದೇ ರೀತಿಯ ಮೂಳೆ ಮುರಿತದ ಗಾಯ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರನಿಗೆ ಸಹಾಯ ಮಾಡಲು ಸುಳ್ಳು ಅಂಗನ್ಯೂನತೆ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.